**ಓ.ಎಸ್. ನಂ. 503/2015 ಪಿ.ಡಬ್ಲೂ-1 ಹೆಸರು - ಲಕ್ಷೀ**

**ಸಾಕ್ಷಿಯನ್ನು ದಿನಾಂಕಃ 27.01.2023 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮು. ಪಾಟೀ ಸವಾಲುಃ ಶ್ರೀ. ಕೆ ಎಂ ಕೆ ವಕೀಲರಿಂದಃ-**

5. ಕಳಲೆ ಗ್ರಾಮದ ಸರ್ವೆ ನಂಬರ್ 264/3, 242/2, 263/3, 5/6 ರ ಜಮೀನುಗಳು ನನ್ನ ಪತಿಯಾದ ಗಂಗಾಧರ ನಾಯಕರವರ ಸಹೋದರಿಯಾದ ಚಿಕ್ಕಮ್ಮರವರ ಹೆಸರಿನಲ್ಲಿ ಖಾತೆ ಇದ್ದು ಅನುಭವದಲ್ಲಿದ್ದಾರೆ ಎಂದರೆ ಸರಿ. ಅಂತೆಯೇ ಹೊಸಕೋಟೆ ಮಸಗೆ ಗ್ರಾಮದ ಸರ್ವೆ ನಂಬರ್ 46/1 ರ 3 ಎಕರೆ 1 ಗುಂಟೆ ಸ್ವತ್ತು ಚಿಕ್ಕಮ್ಮರವರ ಹಿಸ್ಸೆಗೆ ಬಂದಿದ್ದು ಅದನ್ನು ಮಾರಾಟ ಮಾಡಿದ್ದಾರೆ ಎಂದರೆ ಸರಿ. ಸಾಕ್ಷಿಗೆ ತೋರಿಸಲಾದ ಪಹಣಿಗಳನ್ನು ನಿಡಿ 13 ರಿಂದ 18 ಎಂದು ಗುರುತಿಸಲಾಯಿತು. ಅಸಲು ದಾವಾ ಸಂಖ್ಯೆ 530/2012 ನ್ನು ನಾನು ಈ ಹಿಂದೆ ದಾವೆಯನ್ನು ಸಲ್ಲಿಸಿದ್ದು, ಸದರಿ ದಾವೆ ವಜಾಗೊಂಡಿರುತ್ತದೆ ಎಂದರೆ ಸರಿಯಲ್ಲ. ಈ ಪ್ರಕರಣದ ಪ್ರತಿವಾದಿ ನನ್ನ ಮತ್ತು 1 ನೇ ವಾದಿಯ ವಿರುದ್ದ ವಿಭಾಗ ಕೋರಿ ಮಾನ್ಯ ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಲಯ, ನಂಜನಗೂಡಿನಲ್ಲಿ ದಾವೆ ಸಲ್ಲಿಸಿದ್ದಾರೆ ಎಂದರೆ ಗೊತ್ತಿಲ್ಲ. 2002 ರ ವಿಭಾಗದಂತೆ 1 ನೇ ಪ್ರತಿವಾದಿಗೆ 4 ಎಕರೆ ಜಮೀನು ಬಂದಿದೆ ಎಂದರೆ ಸಾಕ್ಷಿ ಅವರಿಗೆ ನಮ್ಮೆಲ್ಲರಿಗಿಂತ 5 ಎಕರೆ ಹೆಚ್ಚಾಗಿ ಬಂದಿದೆ ಎಂದು ಹೇಳುತ್ತಾರೆ. ನಾವು 10 ಎಕರೆ 22 ಗುಂಟೆಯಲ್ಲಿ ಸ್ವಾಧೀನದಲ್ಲಿದ್ದೇವೆ ಎಂದರೆ ಸರಿ. 1 ನೇ ಪ್ರತಿವಾದಿ 4 ಎಕರೆ ಜಮೀನಿನಲ್ಲಿ ಸ್ವಾಧೀನದಲ್ಲಿದ್ದಾರೆ ಎಂದರೆ ಸಾಕ್ಷಿ ಉಳಿಕೆ 12 ಎಕರೆಯಲ್ಲಿ ಸ್ವಾಧೀನತೆಯಲ್ಲಿದ್ದು, ಒಟ್ಟು 1 ನೇ ಪ್ರತಿವಾದಿಗೆ 18 ಎಕರೆ ಜಮೀನು ಇದೆ ಎಂದು ಹೇಳುತ್ತಾರೆ. 1 ನೇ ಪ್ರತಿವಾದಿಗೆ 18 ಎಕರೆ ಜಮೀನು ಇಲ್ಲ ಎಂದರೆ ಸರಿಯಲ್ಲ. 1 ನೇ ವಾದಿಗೆ 12 ಎಕರೆ 31 ಗುಂಟೆ ಸ್ವಾಧೀನತೆ ಇದೆ ಎಂದರೆ ನನಗೆ ಗೊತ್ತಿಲ್ಲ. ಚಿಕ್ಕಮ್ಮರವರು 6 ಎಕರೆಯಲ್ಲಿ ಸ್ವಾಧೀನತೆಯಲ್ಲಿದ್ದಾರೆ ಎಂದರೆ ಸರಿ. ದಾವಾ ಸ್ವತ್ತುಗಳು 1 ನೇ ಪ್ರತಿವಾದಿಯ ಸ್ವತ್ತುಗಳು ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳ ಕುರಿತು 1 ನೇ ಪ್ರತಿವಾದಿಯ ತಂದೆ ಮಲಿಯನಾಯಕ ಹಾಗೂ ಆತನ ಸಹೋದರನಾದ ಸಿದ್ದನಾಯಕರವರ ನಡುವೆ ದಾವೆ ನಡೆದಿತ್ತು ಎಂದರೆ ಸರಿ.

6. ನನ್ನ ಮಾವನಾದ ಮಲಿಯನಾಯಕರವರ ಮರಣದ ನಂತರ ಸದರಿ ದಾವೆಯನ್ನು 1 ನೇ ಪ್ರತಿವಾದಿ ನಡೆಸಿದ್ದಾರೆ ಎಂದರೆ ಸಾಕ್ಷಿ ನಾವೆಲ್ಲರೂ ಸದರಿ ದಾವೆಯನ್ನು ನಡೆಸಲು ಖರ್ಚು ನೀಡಿದ್ದೇವೆ ಎಂದು ಹೇಳುತ್ತಾರೆ. ಎಷ್ಟು ಹಣ ನೀಡಿದ್ದೇವೆ ಎಂದು ಗೊತ್ತಿಲ್ಲ. ಸದರಿ ದಾವೆಯನ್ನು 1 ನೇ ಪ್ರತಿವಾದಿ ಮಾತ್ರವೇ ವೆಚ್ಚ ಮಾಡಿ ನಡೆಸಿರುವುದರಿಂದ ಸದರಿ ಸ್ವತ್ತುಗಳ ಕುರಿತು 1 ನೇ ಪ್ರತಿವಾದಿಗೆ ಮಾತ್ರ ಹಕ್ಕು ಇದೆ ಎಂದರೆ ಸರಿಯಲ್ಲ. ನಮಗೆ ಸೇರಿದ 10 ಎಕರೆ 22 ಗುಂಟೆ ಜಮೀನನ್ನು ಪಾಲುಪಾರಿಕತ್ತಿನ ಮೂಲಕ ಪಡೆದಿರುವುದಕ್ಕೆ 1 ನೇ ಪ್ರತಿವಾದಿ ಸಹಿ ಮಾಡಿರುತ್ತಾರೆ. ಆ ಕುರಿತು ದಾಖಲಾತಿಯನ್ನು ಹಾಜರುಪಡಿಸುತ್ತೇನೆ.

**<u>( ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗಾಗಿ ಮುಂದೂಡಲಾಯಿತು)</u>**

ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

**ಓ ಹೇ ಕೇ ಸ ಇದೆ ಎಂ ಒ**

ಸಹಿ/-

**ಪ್ರಧಾನ ಸಿ.ಜೆ ಮತ್ತು ಪ್ರದನ್ಯಾದಂ,**

**ನಂಜನಗೂಡು**